
ನಿಲ್ಲಿಸಿತು. ಜಯಕುಮಾರ್ ಅವರ ವ್ಯಕ್ತಿತ್ವದಷ್ಟೇ ಪ್ರಖರವಾದ ಕುಂಞಮ್ಮನವರು ಅಜ್ಞಾತ ನಾಯಕಿಯಂತೆ ಕಾಣತೊಡಗಿದರು. ನಿಜವೆಂದರೆ, ಆಕೆಯನ್ನು ಮಹಾನಾಯಕಿಯಂತೆಯೂ, ಎಲ್ಲ ಹೆಣ್ಣಿನಲ್ಲೂ ಇರುವ, ದುರ್ದಮ್ಯ ಪರಿಸ್ಥಿತಿಗಳಲ್ಲಿ ಅದು ಸ್ಫೋಟಗೊಳ್ಳುವ ಹೆಣ್ಣಿನ ಐತಿಹಾಸಿಕ ಪರಂಪರೆಯೊಂದು ಇದೆಯಲ್ಲ, ಆ ಪರಂಪರೆಯ ಗಟ್ಟಿಕೊಂಡಿಯಾಗಿಯೂ ಕುಂಞಮ್ಮ ಕಾಣಿಸುತ್ತಾರೆ.

ಜಯಕುಮಾರ್ ಈ ಕೃತಿಯ ರಚನೆಯನ್ನು ಆರಂಭಿಸಿದ್ದೇ ದುರಂತ ನಾಟಕೀಯ ಸನ್ನಿವೇಶದಲ್ಲಿ. "ನನ್ನ ಆರೋಗ್ಯ ಕೈಕೊಡುವ ಮುನ್ಸೂಚನೆ ದೊರೆತೊಡನೆ ಅದನ್ನು ವೈದ್ಯರು ದೃಢೀಕರಿಸಿ, 'ಮನಸ್ಸಿಗೆ ಹಿತವಾದುದನ್ನು ಮಾಡಿ, ಇಷ್ಟವಾದ ಸ್ಥಳಕ್ಕೆ ಭೇಟಿ ನೀಡಿ, ಹಿತವಾದುದನ್ನು ತಿನ್ನಿ' ಎಂದು ಸಮಾಧಾನ ಮಾಡುವಾಗಲೇ ಎಲ್ಲಾ ಅರಿವಿಗೆ ಬಂತು' ಎನ್ನುತ್ತಲೇ, ದೇಹ ಇಷ್ಟಕ್ಕಾದರೂ ಅವಕಾಶ ನೀಡಿದ್ದಕ್ಕೆ ಧನ್ಯವಾದ ಸಲ್ಲಿಸಿ" ಎಂದು ಮುಂದುವರೆಸುತ್ತಾರೆ. ಇಷ್ಟವಾದುದು ಎನ್ನುವಾಗ ಇಷ್ಟವಾದ ಬದುಕು, ಇಷ್ಟವಾದವರ ವ್ಯಕ್ತಿತ್ವ ಇವುಗಳ ನೆನಪೇ ನೀಡುವ ಹಿತ ಎಂದು ವ್ಯಾಖ್ಯಾನಿಸಿಕೊಂಡ ಜಯಕುಮಾರ್ ಅವರ ವ್ಯಕ್ತಿತ್ವದ ಮೂಲಗುಣವೊಂದು ತಿಳಿಯುತ್ತದೆ. ಕ್ಯಾನ್ಸರ್ ಎನ್ನುವ ಹೆಸರೇ ನಮ್ಮನ್ನು ಅರ್ಧ ಕೊಂದುಬಿಡುತ್ತದೆ. ಅಂಥದ್ದರಲ್ಲಿ ಇವರು ಅದನ್ನು 'ಓ ನೀನಾ, ಬಂದೇ ಬಿಟ್ಯಾ? ಏನು ಅಷ್ಟು ಅವಸರ, ಆಯ್ತು ಇರಲಿ, ಇರಪ್ಪ ಸ್ವಲ್ಪ ಬರ್ತೀನಿ' ಎನ್ನುವ ಲೋಕಾಭಿರಾಮದಲ್ಲಿ ಕಂಡು, ಯಾವತ್ತಿದ್ದರೂ ಬರಲೇಬೇಕಾದ್ದು ಬಂದಾಯ್ತಲ್ಲ, ಇನ್ನ್ಯಾಕೆ ತಡ, ಇರೋ ಕೆಲಸಾನೆಲ್ಲ ಮುಗಿಸಿ, ಹೊರಡೋಣ ಅತ್ಲಾಗೆ ಎನ್ನುವ ಸಹಜತೆಯಲ್ಲಿ ಅದನ್ನು ಎದುರಿಸಿದರು.

ಇದು ಆತ್ಮಚರಿತ್ರೆ ಅಲ್ಲ, ಇದೊಂದು ಸಾಮಾನ್ಯರ ಅಸಾಮಾನ್ಯ ಚರಿತ್ರೆ. ಯಾರನ್ನು ಕುವೆಂಪು ಶ್ರೀಸಾಮಾನ್ಯ ಎನ್ನುತ್ತಾರೋ, ಅವರಲ್ಲೇ ಎಲ್ಲ ಅಸಾಧಾರಣ ಗುಣಗಳ ಬೀಜಗಳು, ಲಕ್ಷಣಗಳು ಇರುತ್ತವೆ ಎನ್ನುವುದನ್ನು ಇತಿಹಾಸದ ಮರೆತ, ಅವಿತಿಟ್ಟ ಪುಟಗಳು




ಕಾಡು ಹಾದಿಯ ಬೆಳಕಿನ ಜಾಡು
ಲೇ: ಆರ್. ಜಯಕುಮಾರ್
ಪು: 186; ಬೆ: ರೂ. 200
ಪ್ರಕಾಶನ: ಪ್ರಜಾ ಪುಸ್ತಕ
ಫೋನ್: 9632836949

ಹೇಳುತ್ತವೋ, ಯಾವ ಶ್ರೀಸಾಮಾನ್ಯರ ಪರಂಪರೆಯೇ ಇತಿಹಾಸವನ್ನು ಕಟ್ಟುತ್ತದೋ ಅದು ಈ ಕೃತಿಯ ಶರೀರವಾದರೆ, ಇದರ ಶಾರೀರ ಹೆಣ್ಣು. ಯಾವ ಹೆಣ್ಣಿನ ಶರೀರವನ್ನು ಮಾತ್ರ ಕಾಣುತ್ತಾ ಅವಳ ಶಾರೀರವನ್ನು ಕಡೆಗಣ್ಣಿನಿಂದ ನೋಡಲಾಗುತ್ತದೆಯೋ ಆ ಶಾರೀರವು ಈ ಕೃತಿಯುದ್ದಕ್ಕೂ ಅಶರೀರವಾಣಿಯಾಗಲ್ಲ, ಸಶರೀರವಾಣಿಯಾಗಿ ಮೊಳಗುತ್ತಾ ಹೋಗುತ್ತದೆ. ಯಾವುದನ್ನು ಕೇಳುವುದು, ಕಾಣುವುದು ಈಗಲೂ ಈ ಸಮಾಜದಲ್ಲಿ ಆಘಾತಕಾರಿಯೋ ಅದನ್ನು ಕುಂಞಮ್ಮ ತನ್ನ ಆಜನ್ಮ ಸಿದ್ಧ ಹಕ್ಕು ಎನ್ನುವಂತೆ, ಬದುಕು ಇರೋದೇ ಹೀಗಲ್ಲವೆ ಎನ್ನುವ ಅತುಲ